**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ರವರು ನಿಯಮ 72ರಡಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

**ವಿಷಯ:**

ಬೆಂಗಳೂರು ನಗರದ ಪ್ರತಿಷ್ಠಿತ ಲಾಲ್ ಬಾಗ್ ನ ಒಳಭಾಗದಲ್ಲಿ ಖಾಸಗಿ ಸೊಸೈಟಿಗಳಿಗೆ ಸರ್ಕಾರಿ ಭೂಮಿಯನ್ನು ಗುತ್ತಿಗೆ ನೀಡಲಾಗಿದ್ದು, ಈ ಸಂಸ್ಥೆಗಳು ತೋಟಗಾರಿಕೆ ಇಲಾಖೆಯ ಜಾಗ ಮತ್ತು ಮಾನವ ಸಂಪನ್ಮೂಲವನ್ನೇ ಬಳಸಿಕೊಂಡು ಸುದೀರ್ಘ ಕಾಲದಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವನ್ನು ಉಂಟು ಮಾಡುತ್ತಿರುವ ಕುರಿತು.

**ಉತ್ತರ**

ಲಾಲ್ ಬಾಗ್ ಸಸ್ಯಶಾಸ್ತ್ರೀಯ ತೋಟದ ಒಳಭಾಗದಲ್ಲಿ ಸರ್ಕಾರಿ ಆದೇಶ ಸಂಖ್ಯೆ:ಕೃತೋಇ 52 ತೋಇವಿ 88 ಬೆಂಗಳೂರು ದಿನಾಂಕ:18-02-1991 ರ ರೀತ್ಯಾ ದಿ ನರ್ಸರಿ ಮೆನ್ ಕೋಆಪರೇಟೀವ್ ಸೊಸೈಟಿ ಲಿಮಿಟೆಡ್ ಮತ್ತು ಮೈಸೂರು ಉದ್ಯಾನ ಕಲಾಸಂಘ ರವರುಗಳಿಗೆ ಗುತ್ತಿಗೆ ಆಧಾರದ ಮೇಲೆ ಕ್ರಮವಾಗಿ 28 ಗುಂಟೆ ಮತ್ತು 1 ಎಕರೆ 29 ಗುಂಟೆ ಜಾಗವನ್ನು ನೀಡಲಾಗಿರುತ್ತದೆ. ಈ ಬಗ್ಗೆ ಪೂರ್ಣ ವಿವರಗಳು ಕೆಳಕಂಡಂತೆ ಇರುತ್ತವೆ.

**I. ದಿ ನರ್ಸರಿ ಮೆನ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, (The Nurserymen Co-Operative Society, Ltd)**

1. ದಿ ನರ್ಸರಿ ಮೆನ್ ಕೋ-ಆಪರೇಟೀವ್ ಸೊಸೈಟಿಗೆ 1ಎಕರೆ 29 ಗುಂಟೆ ಪ್ರದೇಶವನ್ನು ಎಕರೆಗೆ ವಾರ್ಷಿಕ ರೂ.2500/- ರಂತೆ ಒಟ್ಟು ವಾರ್ಷಿಕ ರೂ.4125/- ಗಳ ಬಾಡಿಗೆ ಮೊತ್ತವನ್ನು ನೀಡುವ ಷರತ್ತಿಗೊಳಪಟ್ಟು ದಿನಾಂಕ:04-03-1991 ರಿಂದ 03-03-2016ರ ವರೆಗೆ ಸರ್ಕಾರಿ ಆದೇಶ ಸಂಖ್ಯೆ: ಕೃತೋಇ/62/ತೋಇವಿ 88, ಬೆಂಗಳೂರು, ದಿನಾಂಕ:18-02-1991 ರ ರೀತ್ಯ ಗುತ್ತಿಗೆಯನ್ನು ನೀಡಲಾಗಿರುತ್ತದೆ.

2. ಮೇಲ್ಕಂಡ ಗುತ್ತಿಗೆ ಅವಧಿಯು 25 ವರ್ಷಗಳಿಗೆ ಮಾತ್ರ ಸೀಮಿತವಾಗಿದ್ದು, 2016 ರ ಮಾರ್ಚ ಮಾಹೆಗೆ ಮುಕ್ತಾಯವಾಗಿರುತ್ತದೆ.

3. ಗುತ್ತಿಗೆ ಕರಾರು ಒಪ್ಪಂದದ ಕಂಡಿಕೆ ಸಂಖ್ಯೆ (9) ರನ್ವಯ ನಿಗದಿತ ಗುತ್ತಿಗೆ ಅವಧಿಯು ಮುಕ್ತಾಯವಾದ ನಂತರ ಯಾವುದೇ ಪರಿಹಾರವನ್ನು ಅಪೇಕ್ಷಿಸದೇ, ಆ ಪ್ರದೇಶ ಮತ್ತು ಅಲ್ಲಿರುವ ಮೂಲಭೂತ ಸೌಕರ್ಯಗಳನ್ನು ಇಲಾಖೆಗೆ ಹಿಂದಿರುಗಿಸಬೇಕು ಎಂಬ ಷರತ್ತಿಗೊಳಪಟ್ಟಿರುತ್ತದೆ. ಹಾಗೂ ಕರಾರನ್ನು ನವೀಕರಿಸಲು ಇಲ್ಲವೇ ವಿಸ್ತರಣೆಗೊಳಿಸುವ ಬಗ್ಗೆ ಯಾವುದೇ ಅವಕಾಶಗಳಿರುವುದಿಲ್ಲ.

4. ಗುತ್ತಿಗೆ ಕರಾರು ಒಪ್ಪಂದದ ಕಂಡಿಕೆ ಸಂಖ್ಯೆ (15) ರನ್ವಯ ತೋಟಗಾರಿಕೆ ಇಲಾಖೆ ಮತ್ತು ಸೊಸೈಟಿಯ ನಡುವೆ ಯಾವುದೇ ರೀತಿಯ ವ್ಯಾಜ್ಯಗಳು ಉದ್ಭವಿಸಿದಲ್ಲಿ ಸರ್ಕಾರವು ತೆಗೆದುಕೊಳ್ಳುವ ತೀರ್ಮಾನವು ಅಂತಿಮವಾಗಿದ್ದು, ಈ ತೀರ್ಮಾನಕ್ಕೆ ಇಲಾಖೆ ಮತ್ತು ಸದರಿ ಸೊಸೈಟಿಯು ಬದ್ಧರಾಗಿರಬೇಕು ಎಂದಿರುತ್ತದೆ.

5. ಸದರಿ ಸೊಸೈಟಿಯು ಸಹಕಾರ ಸಂಘಗಳ ಕಾಯ್ದೆಯಡಿ 1961 ರಲ್ಲಿ ನೊಂದಣಿಯಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮದಡಿ 4ಜಿ ವಿನಾಯಿತಿ ಪಡೆದು, ಕಾರ್ಮಿಕರು/ಸಿಬ್ಬಂದಿ ಸೇವೆ ಪಡೆಯುವುದು ಮತ್ತು ಇತರೇ ಕಾಮಗಾರಿಗಳನ್ನು ಅಪೇಕ್ಷಿತ ಚಟುವಟಿಕೆಗಳ ವ್ಯಾಪ್ತಿ ಮೀರಿ ಕೋಟ್ಯಾಂತರ ರೂ.ಗಳ ಮೊತ್ತದಲ್ಲಿ ಕೈಗೊಳ್ಳುತ್ತಿದ್ದಾರೆ. 4ಜಿ ವಿನಾಯಿತಿ ಯೊಂದರಿಂದಲೇ ಶೇ.87.89 ರಷ್ಟು ವಹಿವಾಟನ್ನು ಸೊಸೈಟಿಯೂ ನಡೆಸುತ್ತಿದೆ. ಈ ವಹಿವಾಟಿನ ಮೊತ್ತವು ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ.

6. ದಿ ನರ್ಸರಿ ಮೆನ್ ಕೋ-ಆಪರೇಟಿವ್ ಸೊಸೈಟಿಯು ವಾಣಿಜ್ಯ ಚಟುವಟಿಕೆಯನ್ನು ನಡೆಸುತ್ತಿದ್ದು, ಕಳೆದ ವರ್ಷವೊಂದರಿಂದ್ಲಲೇ ರೂ.130.00 ಕೋಟಿಗೂ ಹೆಚ್ಚಿನ ಮೊತ್ತದ ವಹಿವಾಟನ್ನು ನಡೆಸಿರುತ್ತದೆ. ಕಳೆದ ಕೆಲವೇ ವರ್ಷಗಳಲ್ಲಿ ಒಟ್ಟಾರೆ ರೂ.708.00 ಕೋಟಿಗಳ ಬೃಹತ್ ಮೊತ್ತದ ವಹಿವಾಟನ್ನು ನಡೆಸಿದ್ದು, ಸೊಸೈಟಿಯು ರೂ.255.00 ಕೋಟಿಗಳ ನಿವ್ವಳ ಲಾಭವನ್ನು ಗಳಿಸಿರುತ್ತದೆ. ಹಾಲಿ ಸೊಸೈಟಿಯ ಬ್ಯಾಂಕ್ ಖಾತೆಯಲ್ಲಿರುವ ಶಿಲ್ಕು ರೂ.8.8 ಕೋಟಿಗಳಾಗಿದ್ದು, ಹೂಡಿಕೆಗಳ ಮೊತ್ತ ರೂ.18.61 ಕೋಟಿಗಳಾಗಿರುತ್ತದೆ. ಈ ಎರಡು ಬಾಬ್ತಿನ ಒಟ್ಟಾರೆ ಮೊತ್ತವು ರೂ.27.41 ಕೋಟಿಗಳಾಗಿರುತ್ತದೆ. ವರ್ಷವಾರು ವಹಿವಾಟಿನ ವಿವರಗಳು ಇಂತಿವೆ.

**2009 -10ರಿಂದ 2021-22 ನೇ ಯ ಸಾಲಿನ ವರೆಗಿನ ದಿ.ನರ್ಸರಿಮೆನ್ ಕೋ-ಆಪರೇಟಿವ್ ಸೊಸೈಟಿಯ ವಹಿವಾಟು / ಲಾಭದ ವಿವರಗಳು**

| ಕ್ರ. ಸಂ | ವರ್ಷ | ವಹಿವಾಟು (ರೂ.ಲಕ್ಷಗಳಲ್ಲಿ) | ನಿವ್ವಳ ಲಾಭ (ರೂ.ಲಕ್ಷಗಳಲ್ಲಿ) |
|---|---|---|---|
| 1. | 2009-10 | 830.93 | 0.33 |
| 2. | 2010-11 | 788.84 | 0.77 |
| 3. | 2011-12 | 2193.73 | 3.18 |
| 4. | 2012-13 | 3490.35 | 2.08 |
| 5. | 2013-14 | 2682.75 | 29.12 |
| 6. | 2014-15 | 2928.15 | 72.08 |
| 7. | 2015-16 | 2415.74 | 52.28 |
| 8. | 2016-17 | 2348.49 | 142.48 |
| 9. | 2017-18 | 5853.66 | 390.93 |
| 10. | 2018-19 | 13616.34 | 716.31 |
| 11. | 2019-20 | 12404.39 | 439.97 |
| 12. | 2020-21 | 9565.5 | 320.67 |
| 13. | 2021-22 | 11751.78 | 381.63 |
| | **ಒಟ್ಟುಮೊತ್ತ** | **70870.65** | **2551.83** |

**7) <u>ದಿ.ನರ್ಸರಿ ಮೆನ್ ಕೋ ಆಪರೇಟೀವ್ ಸೋಸೈಟಿಯ ಖಾತೆಯಲ್ಲಿರುವ ಶಿಲ್ಕು ಮತ್ತು ಹೂಡಿಕೆಗಳ ವಿವರಗಳು</u>**

**7A) ಬ್ಯಾಂಕ್ ಖಾತೆಗಳಲ್ಲಿ ಪ್ರಸ್ತುತ ಇರುವ ಶಿಲ್ಕು ಮಾರ್ಚ್ - 2022 ಅಂತ್ಯದವರೆಗಿನ ವಿವರಗಳು**

| ಕ್ರ. ಸಂ | ಬ್ಯಾಂಕಿನ ಹೆಸರು | ಉಳಿಕೆ ಶಿಲ್ಕು (ರೂ.ಲಕ್ಷಗಳಲ್ಲಿ) |
|---|---|---|
| 1 | ಯೂನಿಯನ್ ಬ್ಯಾಂಕ್, ಬೆಂಗಳೂರು | 244.69 |
| 2 | SBI ಬ್ಯಾಂಕ್, ಬೆಂಗಳೂರು | 543.75 |
| 3 | ಬಿ.ಡಿ.ಸಿ.ಸಿ ಬ್ಯಾಂಕ್, ಬೆಂಗಳೂರು | 16.02 |
| 4 | ಯೂನಿಯನ್ ಬ್ಯಾಂಕ್, ಮೈಸೂರು | 26.34 |
| 5 | SBI ಬ್ಯಾಂಕ್, ಹಾಸನ | 17.88 |
| 7 | SBI ಆನ್ ಲೈನ್ ಖಾತೆ | 31.93 |
| ಒಟ್ಟು | | 880.61 (8.80 ಕೋಟಿಗಳು) |

7B) ಹೂಡಿಕೆಗಳು ಮತ್ತು ಸ್ಥಿರ ಠೇವಣಿಗಳು ದಿನಾಂಕ:31-03-2022

(ರೂ.ಲಕ್ಷಗಳಲ್ಲಿ)

| | | |
|---|---|---|
| 1 | ಕರ್ನಾಟಕ ರಾಜ್ಯ ಸಹಕಾರ ಅಫೆಕ್ಸ್ ಬ್ಯಾಂಕಿನಲ್ಲಿ ಆಪದ್ಧನ | 1.25 |
| 2 | ಎಸ್.ಬಿ.ಐ ನಲ್ಲಿ ನಿಶ್ಚಿತ ಠೇವಣಿ | 854.84 |
| 3 | ಯೂನಿಯನ್ ಬ್ಯಾಂಕ್ ನಲ್ಲಿ ನಿಶ್ಚಿತ ಠೇವಣಿ | 1005.14 |
| | **ಒಟ್ಟು** | 1861.23 (18.61 ಕೋಟಿಗಳು) |

**7C) ಘೋಷ್ವಾರೆ**

I. ಬ್ಯಾಂಕ್ ಖಾತೆಯಲ್ಲಿರುವ ಶಿಲ್ಕು – ರೂ.8.80 ಕೋಟಿಗಳು
II. ಹೂಡಿಕೆಗಳು - 18.61 ಕೋಟಿಗಳು

ಒಟ್ಟು ಮೊತ್ತ ರೂ.27.41 ಕೋಟಿಗಳು ದಿ ನರ್ಸರಿ ಮೆನ್ ಕೋ ಆಪರೇಟೀವ್ ಸೋಸೈಟಿಯು ಹೊಂದಿದೆ.

8. ರೈತ ವರ್ಗ ಮತ್ತು ತೋಟಗಾರಿಕೆ ಆಸಕ್ತರಿಗೆ ರಿಯಾಯಿತಿ ದರದಲ್ಲಿ ಕಸಿ-ಸಸಿ ಗಿಡಗಳನ್ನು ಮತ್ತು ಪೂರಕ ಪರಿಕರಗಳನ್ನು ಒದಗಿಸುತ್ತಿಲ್ಲ. ಜೊತೆಗೆ ರೈತ ವರ್ಗ ಮತ್ತು ಸಾರ್ವಜನಿಕರ ಹಿತಾಶಕ್ತಿಗೆ ಪೂರಕವಾಗಿಯೂ ಸಹಾ ಸೊಸೈಟಿಯು ಕಾರ್ಯನಿರ್ವಹಿಸುತ್ತಿಲ್ಲ.
9. ಸೊಸೈಟಿಗೆ ಸದಸ್ಯರಾಗಿರುವ ನರ್ಸರಿದಾರರು ತಾವಾಗಿಯೇ ಕಸಿ/ಸಸಿ ಗಿಡಗಳನ್ನು ಉತ್ಪಾದಿಸಿ ಸೋಸೈಟಿಗೆ ನೀಡುವ ಬದಲು ಬೇರೆ ರಾಜ್ಯಗಳಿಂದ (ಕಡಿಯಂ, ಮೆಲ್ ಚೆಂಗಂ,ಪೂನಾ ಇತ್ಯಾದಿ) ಕಡಿಮೆ ದರದಲ್ಲಿ ಕಸಿ/ ಸಸಿ ಗಿಡಗಳನ್ನು ತರಿಸಿ ಸೋಸೈಟಿಗೆ ಹೆಚ್ಚಿನ ದರದಲ್ಲಿ ಮಾರಾಟ ಮಾಡುವ ಮುಖೇನ ಅತೀ ಹೆಚ್ಚಿನ ಲಾಭ ಗಳಿಸುತ್ತಿದ್ದು, ರೈತರ ಹಿತಕ್ಕಾಗಿ ಸೇವೆ ಒದಗಿಸುವ ಬದಲು ಲಾಭಾಂಶವನ್ನು ಹೊಂದುವ ಒಂದೇ ಉದ್ದೇಶದಿಂದ ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿದೆ.
10. ಬೆಂಗಳೂರು ನಗರ ವ್ಯಾಪ್ತಿ ಮತ್ತು ಹೊಂದಿಕೊಂಡ ಪ್ರದೇಶಗಳಲ್ಲಿ ಪ್ರಸ್ತುತ 5000 ಕ್ಕೂ ಹೆಚ್ಚಿನ ಸಂಖ್ಯೆಯ ಸಸ್ಯಾಗಾರಗಳಿರುತ್ತವೆ.
11. ಲಾಲ್ ಬಾಗ್ ಸಸ್ಯತೋಟದ ದಕ್ಷಿಣ ದ್ವಾರದ ಸಮೀಪವಿರುವ ಸಿದ್ದಾಪುರ ಪ್ರದೇಶದಲ್ಲಿಯೇ 100 ಕ್ಕೂ ಹೆಚ್ಚಿನ ಸಂಖ್ಯೆಯ ಸಸ್ಯಾಗಾರಗಳಿರುತ್ತವೆ.
12. ದಿ ನರ್ಸರಿ ಮೆನ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಮಾರಾಟ ಮಾಡುತ್ತಿರುವ ಕಸಿ/ಸಸಿ ಗಿಡಗಳು ಮತ್ತು ಪರಿಕರ ದರಗಳು ಪ್ರಸ್ತುತ ಮಾರುಕಟ್ಟೆ ದರಗಳಿಗಿಂತ ಅತೀ ಹೆಚ್ಚಿಗೆ ಇರುತ್ತವೆ.
13. ಸೊಸೈಟಿಗೆ ನೀಡಿರುವ ಗುತ್ತಿಗೆ ಮೊತ್ತ 1 ಎಕರೆ 29 ಗುಂಟೆ ಜಾಗದ ಪ್ರಸ್ತುತ ಮಾರುಕಟ್ಟೆ ಮೌಲ್ಯವು ರೂ.250.0 ಕೋಟಿಗಳಿಗಿಂತಲೂ ಹೆಚ್ಚಾಗಿರುತ್ತದೆ.

14. ಗುತ್ತಿಗೆ ಮೊತ್ತ ಎಕರೆಗೆ ರೂ.2500/- ಗಳಂತೆ ವಾರ್ಷಿಕ ರೂ.4125/- ಗಳನ್ವಯ 1991 ರಿಂದ 2016ರ ವರೆಗೆ ಒಟ್ಟಾರೆ ಗುತ್ತಿಗೆ ಮೊತ್ತ ರೂ.1,03,125/- ಗಳನ್ನು ಸೊಸೈಟಿಯು ತೋಟಗಾರಿಕೆ ಇಲಾಖೆಗೆ ಪಾವತಿಸಿರುತ್ತದೆ.

15. ಕಂದಾಯ ಇಲಾಖೆಯ ಜಿಲ್ಲಾ ನೊಂದಣಿ ಕಛೇರಿ ವ್ಯಾಪ್ತಿಯ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿಯ ದರಪಟ್ಟಿಯನ್ವಯ ಪ್ರಸ್ತುತ ನೆಲ ಬಾಡಿಗೆಯು ಕನಿಷ್ಠ ದರದನ್ವಯ ಸೊಸೈಟಿಯು ಮಾಹೆಯಾನ ರೂ.23,37,905/- ಗಳ ಬಾಡಿಗೆ ದರವನ್ನು ಪಾವತಿಸಬೇಕಾಗಿರುತ್ತದೆ. ಇದರನ್ವಯ ವಾರ್ಷಿಕ ರೂ.2,80,54,860/- ಗಳ ಬಾಡಿಗೆ ಮೊತ್ತವಾಗುತ್ತದೆ. ಅದೇ ರೀತಿ ಗರಿಷ್ಠ ನೆಲ ಬಾಡಿಗೆ ಮೊತ್ತದನ್ವಯ ಮಾಹೆಯಾನ ರೂ.59,61,659/- ಗಳಾಗಲಿದ್ದು, ವಾರ್ಷಿಕ ರೂ.7,15,39,908/- ಗಳಾಗುತ್ತದೆ. ಸೊಸೈಟಿಯ ಗುತ್ತಿಗೆ ಅವಧಿಯು 2016 ರ ಮಾರ್ಚ್ ಮಾಹೆಗೆ ಮುಕ್ತಾಯಗೊಂಡಿರುತ್ತದೆ. 2016 ರ ಎಪ್ರಿಲ್ ಮಾಹೆಯಿಂದ ನವೆಂಬರ್ 2022ರ ವರೆಗಿನ ಕನಿಷ್ಠ ಬಾಡಿಗೆ ಮೊತ್ತವು ರೂ.18,70,32,400/- ಗಳಾಗುತ್ತದೆ. (ರೂ. ಹದಿನೆಂಟು ಕೋಟಿ ಎಪ್ಪತ್ತು ಲಕ್ಷ ಮುವತತ್ತೆರಡು ಸಾವಿರದ ನಾಲ್ಕು ನೂರು) ಅದೇ ರೀತಿ ಗರಿಷ್ಠ ಬಾಡಿಗೆ ದರದನ್ವಯ ಮೇಲ್ಕಂಡ ಅವಧಿಗೆ ಬಾಡಿಗೆ ಮೊತ್ತವು ರೂ.44,01,80,848/- ಗಳಾಗುತ್ತದೆ. (ರೂ. ನಾಲವತನಾಲ್ಕು ಕೋಟಿ ಒಂದು ಲಕ್ಷದ ಎಂಭತ್ತು ಸಾವಿರದ ಎಂಟು ನೂರ ನಾಲವತ್ತೆಂಟು)

16. ದಿ ನರ್ಸರಿ ಮೆನ್ ಕೋ-ಆಪರೇಟಿವ್ ಸೊಸೈಟಿಯು ಕ್ರ.ಸಂ:13 ರನ್ವಯ ಸರ್ಕಾರಕ್ಕೆ ಪಾವತಿಸಿರುವ ಮೊತ್ತವು ಅತ್ಯಂತ ಕಡಿಮೆ ಮೊತ್ತವಾಗಿದ್ದು, ಕ್ರ.ಸಂ:14 ರಲ್ಲಿ ಉಲ್ಲೇಖಿಸಿರುವ ಮೊತ್ತವು ಪ್ರಸ್ತುತ ಚಾಲ್ತಿಯಲ್ಲಿರುವ ದರಗಳನ್ವಯ ಪಾವತಿಸಬಹುದಾದ ಮೊತ್ತವಾಗಿರುತ್ತದೆ.

17. ಕರ್ನಾಟಕ ಉಚ್ಚನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:W.P.No: 21222/2022 (GM-RES), 21493/2022 ರನ್ವಯ ದಾವೆಗಳು ವಿಚಾರಣಾ ಹಂತದಲ್ಲಿರುತ್ತವೆ. ಮುಂದುವರೆದು ಕರಾರು ಅವಧಿಯು ಮುಗಿದ ನಂತರದಲ್ಲಿ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಸದರಿ ದಾವೆಗಳ ತೀರ್ಪಿಗೆ ಒಳಪಟ್ಟು ವಸೂಲಾತಿ ಕ್ರಮವನ್ನು ನಿಯಮಾನುಸಾರ ಜರುಗಿಸಲಾಗುವುದು.

18. ತೋಟಗಾರಿಕೆ ಇಲಾಖೆಯಲ್ಲಿ ರಾಜ್ಯಾದ್ಯಂತ 413 ತೋಟಗಾರಿಕೆ ಕ್ಷೇತ್ರಗಳು ಮತ್ತು ನರ್ಸರಿಗಳಿದ್ದು, ವಾರ್ಷಿಕ ಸರಾಸರಿ 78.80 ಲಕ್ಷ ವಿವಿಧ ತೋಟಗಾರಿಕೆ ಕಸಿ ಮತ್ತುಸಸಿ ಗಿಡಗಳ ಉತ್ಪಾದನೆಯನ್ನು ಕೈಗೊಳ್ಳಲಾಗುತ್ತಿದೆ. ಹಾಗೇಯೆ ಇಲಾಖೆ ವ್ಯಾಪ್ತಿಯಲ್ಲಿ ಉನ್ನತ ಪದವಿ ಪಡೆದ ಹೆಚ್ಚಿನ ಸಂಖ್ಯೆಯ ತಾಂತ್ರಿಕ ಅಧಿಕಾರಿಗಳಿದ್ದು, ಪ್ರಸ್ತುತ ಇಲಾಖೆಯು ಬಾಹ್ಯ ಬೆಂಬಲವಿಲ್ಲದೇ ತಾವಾಗಿಯೇ ಬೃಹತ್ ಆಧುನಿಕ ನರ್ಸರಿ (ಸಸ್ಯಾಗಾರ) ವನ್ನು ರೈತ ವರ್ಗ ಮತ್ತು ಬೆಂಗಳೂರು ನಗರ ವಾಸಿಗಳಿಗೆ ಅನುಕೂಲವಾಗುವ ರೀತಿ ಪರಿಣಾಮಕಾರಿಯಾಗಿ ಉತ್ಪಾದಿಸಿ ರಿಯಾಯಿತಿ ದರದಲ್ಲಿ ಮಾರಾಟ ಮಾಡಲು ಶಕ್ತವಾಗಿರುತ್ತದೆ.

19. ರೈತರ ಹಿತದೃಷ್ಠಿಯಿಂದ ರಿಯಾಯಿತಿ ದರದಲ್ಲಿ ಕಸಿ/ಸಸಿ ಗಿಡಗಳು, ಪೂರಕ ಪರಿಕರಗಳನ್ನು ಪೂರೈಸುವ ನಿಟ್ಟಿನಲ್ಲಿ ತೋಟಗಾರಿಕೆ ಇಲಾಖೆಯ ಕಾರ್ಯ ಚಟುವಟಿಕೆಗಳಿಗೆ ಪೂರಕವಾಗುವಂತೆ ಹಸರೀಕರಣವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಅತ್ಯಂತ ಕಡಿಮೆ ರಿಯಾಯಿತಿ ದರದಲ್ಲಿ ಜಾಗವನ್ನು ನೀಡಲಾಗಿದ್ದರೂ ಸರ್ಕಾರವು ಯಾವ ಉದ್ದೇಶಕ್ಕಾಗಿ ಜಮೀನು ನೀಡಲಾಗಿದೆಯೋ ಆ ಉದ್ದೇಶವನ್ನು ನಿರೀಕ್ಷಿತ ಮಟ್ಟದಲ್ಲಿ ಗುರಿ ತಲುಪುವಲ್ಲಿ ಸದರಿ ಸಂಸ್ಥೆಯು ವಿಫಲವಾಗಿದೆ. ಹಾಗೂ ಸದಸ್ಯ ನರ್ಸರಿಮೆನ್ ಗಳಿಗೆ ಮಾತ್ರ ಲಾಭ ನೀಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಅಂಶಗಳನ್ನು ಮನಗಂಡ ಸರ್ಕಾರವು ಸರ್ಕಾರದ ಆದೇಶ ಸಂಖ್ಯೆ: HORTI 367 HGM 2022, ಬೆಂಗಳೂರು,

ದಿನಾಂಕ:18-10-2022 ರಲ್ಲಿ ಸದರಿ ಸಂಸ್ಥೆಗೆ ನೀಡಿರುವ ಗುತ್ತಿಗೆಯನ್ನು ರದ್ದುಪಡಿಸಿ ತೋಟಗಾರಿಕೆ ಇಲಾಖೆಗೆ ಜಮೀನನ್ನು ಹಿಂಪಡೆಯಲು ಆದೇಶಿಸಲಾಗಿದೆ.

19a) ದಿ ನರ್ಸರಿ ಮೆನ್ ಕೋ-ಪರೇಟಿವ್ ಸೊಸೈಟಿಯಲ್ಲಿ ಒಟ್ಟಾರೆ 288 ನೊಂದಾಯಿತ ಸದಸ್ಯರಿರುತ್ತಾರೆ. ಈ ಪೈಕಿ 60-70 ಜನ ಸದಸ್ಯರು ಮಾತ್ರ ನರ್ಸರಿ ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, ಸೊಸೈಟಿಯ ಒಟ್ಟಾರೆ ವಾಣಿಜ್ಯ ವಹಿವಾಟು ಆಯ್ದ ಈ ಸದಸ್ಯರಿಗೆ ಮಾತ್ರ ಸೀಮಿತವಾಗಿರುತ್ತದೆ. ಸದರಿ ಸದಸ್ಯರುಗಳು ಕೆಳಕಂಡಂತೆ ಸೊಸೈಟಿಯ ಬಹುಪಾಲು ಲಾಭಾಂಶವನ್ನು ಪಡೆಯುತ್ತಿದ್ದಾರೆ. ಗಿಡಗಳು / ಸಸಿಗಳು / ಪರಿಕರಗಳನ್ನು ದಿ.ನರ್ಸರಿ ಮೆನ್ ಕೋ ಆಪರೇಟೀವ್ ಸೋಸೈಟಿಗೆ ಸರಬರಾಜು ಮಾಡುವ ಮುಖೇನ ದಿ.ನರ್ಸರಿ ಮೆನ್ ಕೋ ಆಪರೇಟೀವ್ ಸೋಸೈಟಿಯ ನಿಗಧಿತ ದರದನ್ವಯ ಮೊತ್ತವನ್ನು ಪಡೆಯುತ್ತಿದ್ದಾರೆ. ಇದು ಮೊದಲ ಲಾಭವಾಗಿದೆ.

19b) ತಾವುಗಳೇ ಗಿಡ / ಸಸಿಗಳನ್ನು ಉತ್ಪಾದಿಸದೆ ತಮಿಳು ನಾಡಿನ ಕಡಿಯಂ, ಮೇಲ್ ಚಂಗಮ್, ಪೂನಾ, ಕೋಲ್ಕತ್ತ ಮುಂತಾದ ಕಡೆಯ ಸಸ್ಯಗಾರಗಳಿಂದ ತೀರಾ ಕಡಿಮೆ ದರದಲ್ಲಿ ಪಡೆದಿದ್ದು, ದಿ.ನರ್ಸರಿ ಮೆನ್ ಕೋ ಆಪರೇಟೀವ್ ಸೋಸೈಟಿಯು ನಿಗಧಿಪಡಿಸಿರುವ ಹೆಚ್ಚುವರಿ ದರಕ್ಕೆ ಮಾರಾಟ ಮಾಡಿ 2 ನೆ ಲಾಭ ಪಡೆಯುತ್ತಿದ್ದಾರೆ.

19c) ದಿ.ನರ್ಸರಿ ಮೆನ್ ಕೋ ಆಪರೇಟೀವ್ ಸೋಸೈಟಿಯು ತನಗೆ ಬರುವ ಒಟ್ಟು ವಾರ್ಷಿಕ ಆದಾಯದಲ್ಲಿ ಡಿವಿಡೆಂಟ್ ರೂಪದಲ್ಲಿ ತನ್ನ ಸದಸ್ಯ ನರ್ಸರಿಮೆನ್ ಗಳಿಗೆ ವಾರ್ಷಿಕ ಸರಾಸರಿ ಶೇಕಡಾ 25% ನಷ್ಟು ಮೊತ್ತವನ್ನು ಡಿವಿಡೆಂಟ್ ರೂಪದಲ್ಲಿ ನೀಡುತ್ತಿದ್ದಾರೆ. ಇದು ಸದಸ್ಯರಿಗೆ ದೊರಕುತ್ತಿರುವ 3 ನೇ ಲಾಭವಾಗಿದೆ.

## II) <u>ಮೈಸೂರು ಉದ್ಯಾನ ಕಲಾ ಸಂಘ :</u>

1. ಮೈಸೂರು ಉದ್ಯಾನ ಕಲಾ ಸಂಘವನ್ನು Registered as per certificate No:AMR 68/88-89 dated:07-06-1988 issued by the register of societies in Karnataka, Bangalore ರಡಿ ನೊಂದಾಯಿಸಲಾಗಿದೆ.

2. ಸರ್ಕಾರದ ಆದೇಶ ಸಂಖ್ಯೆ:AHD/62/AHM/88/ ಬೆಂಗಳೂರು ದಿನಾಂಕ:18-02-1991 ರ ಆದೇಶರನ್ವಯ 1983 ನೇ ಇಸ್ವಿಯಲ್ಲಿ, ಮೈಸೂರು ಉದ್ಯಾನ ಕಲಾ ಸಂಘಕ್ಕೆ ನೀಡ್ಡಿದ್ದ 2 ಎಕರೆ 60 ಸೆಂಟ್ ಜಮೀನಿನಲ್ಲಿ 1 ಎಕರೆ 65 ಸೆಂಟ್ ಜಮೀನನ್ನು ವಾಪಸ್ಸು ಪಡೆದು ಅದನ್ನು ದಿ ನರ್ಸರಿಮೆನ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಬೆಂಗಳೂರು ರವರಿಗೆ ನೀಡಿ, ಉಳಿಕೆ 28 ಗುಂಟೆ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ಮುಂದಿನ 25 ವರ್ಷಗಳವರೆಗೆ ಪ್ರತಿ ವರ್ಷ ರೂ.2500/- ಗಳಂತೆ ಮೈಸೂರು ಉದ್ಯಾನ ಕಲಾ ಸಂಘಕ್ಕೆ ಲೀಸ್ ಮೊತ್ತವನ್ನು ನಿಗಧಿಪಡಿಸಿ ನೀಡಲಾಗಿರುತ್ತದೆ.

3. ಮುಂದುವರೆದು ಮೈಸೂರು ಉದ್ಯಾನ ಕಲಾ ಸಂಘಕ್ಕೆ ಸರ್ಕಾರಿ ಆದೇಶ ಸಂಖ್ಯೆ: ತೋಇ/248/ತೋಇವಿ/2017,ದಿನಾಂಕ:24-05-2018 ರನ್ವಯ 28 ಗುಂಟೆ ಪ್ರದೇಶವನ್ನು ಎಪ್ರಿಲ್ 2016 ರಿಂದ ಮಾರ್ಚ್ 2021 ರ ವರೆಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ವಾರ್ಷಿಕ ರೂ.25,000/- ಗಳ ಪರಿಷ್ಕೃತ ಗುತ್ತಿಗೆ ದರವನ್ನು ನಿಗದಿಪಡಿಸಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು ಎಪ್ರಿಲ್ 2021 ಕ್ಕೆ ಮುಕ್ತಾಯಗೊಂಡಿರುತ್ತದೆ. ಆದರೆ ಈ ಅವಧಿಯಲ್ಲಿ ಗುತ್ತಿಗೆ ಕರಾರು ಪತ್ರವನ್ನು ಮಾಡಿರುವುದಿಲ್ಲ.

4. ಮೈಸೂರು ಉದ್ಯಾನ ಕಲಾ ಸಂಘವು ನಿಗದಿತ ಬಾಡಿಗೆ ಮೊತ್ತ ವಾರ್ಷಿಕ ರೂ.2500/- ಗಳಂತೆ 25 ವರ್ಷಕ್ಕೆ ಒಟ್ಟಾರೆ ರೂ.62,500/-ಗಳನ್ನು ಇಲಾಖೆಗೆ ಪಾವತಿಸಿರುತ್ತಾರೆ. ಮುಂದುವರೆದು 2016 ರಿಂದ 2021 ರವರೆಗೆ ವಾರ್ಷಿಕ ರೂ.25,000/- ಗಳಂತೆ 5 ವರ್ಷಕ್ಕೆ ರೂ.1,25,000/- ಗಳನ್ನು ಪಾವತಿಸಿರುತ್ತಾರೆ. ಮೇಲ್ಕಂಡ ಒಟ್ಟಾರೆ ಅವಧಿಯಲ್ಲಿ 1991 ರಿಂದ 2021 ರವರೆಗಿನ ಅವಧಿಗೆ ಸಂಬಂಧಿಸಿದಂತೆ ಮೈಸೂರು ಉದ್ಯಾನ ಕಲಾಸಂಘದ ವತಿಯಿಂದ ರೂ.1,87,500/-ಗಳನ್ನು ಇಲಾಖೆಗೆ ಪಾವತಿಸಿರುತ್ತಾರೆ.

5. ಕಂದಾಯ ಇಲಾಖೆಯ ಜಿಲ್ಲಾ ನೊಂದಣಿ ಕಛೇರಿ ವ್ಯಾಪ್ತಿಯ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿಯ ದರಪಟ್ಟಿಯನ್ವಯ ಏಪ್ರಿಲ್ – 2016 ರಿಂದ ನವೆಂಬರ್ – 2022 ರವರೆಗೆ ಪ್ರಸ್ತುತ ನೆಲ ಬಾಡಿಗೆಯು ಕನಿಷ್ಠ ದರದನ್ವಯ ಸಂಘವು ಮಾಹೆಯಾನ ರೂ.9,91,840/- ಗಳ ಬಾಡಿಗೆ ದರವನ್ನು ಪಾವತಿಸಬೇಕಾಗಿರುತ್ತದೆ. ಇದರನ್ವಯ 80 ತಿಂಗಳ ಅವಧಿಗೆ ರೂ.7,93,47,200/- ಗಳ ಬಾಡಿಗೆ ಮೊತ್ತವಾಗುತ್ತದೆ. ಅದೇ ರೀತಿ ಗರಿಷ್ಠ ನೆಲ ಬಾಡಿಗೆ ಮೊತ್ತದನ್ವಯ ಮಾಹೆಯಾನ ರೂ.25,09,184/- ಗಳಾಗಲಿದ್ದು, 80 ತಿಂಗಳ ಅವಧಿಗೆ ಒಟ್ಟಾರೆ ರೂ.20,07,34,720/- ಗಳಾಗುತ್ತದೆ.

6. ಮೈಸೂರು ಉದ್ಯಾನ ಕಲಾ ಸಂಘಕ್ಕೆ ಲಾಲ್ ಬಾಗ್ ನಲ್ಲಿ ನೀಡಲಾಗಿರುವ 28 ಗುಂಟೆ ಪ್ರದೇಶದ ಪ್ರಸ್ತುತ ಮಾರುಕಟ್ಟೆ ದರವು ಅಂದಾಜು ರೂ.80.00 ಕೋಟಿಗಳಿಗೂ ಅಧಿಕವಾಗಿರುತ್ತದೆ.

7. ಕಳೆದ 5 ವರ್ಷಗಳಲ್ಲಿ ಮೈಸೂರು ಉದ್ಯಾನ ಕಲಾ ಸಂಘವು ಫಲಪುಷ್ಪ ಪ್ರದರ್ಶನಗಳಿಂದ ಗಳಿಸಿರುವ ಆದಾಯದ ವಿವರಗಳು ಇಂತಿವೆ.

| **ಕ್ರ. ಸಂ** | **ಅವಧಿ (ಜನವರಿ ಮತ್ತು ಆಗಸ್ಟ್ ಮಾಹೆ)** | **ಆದಾಯ (ರೂ.ಗಳಲ್ಲಿ)** |
|---|---|---|
| 1 | ಜನವರಿ – 2017 | 1,54,39,120/- |
| 2 | ಆಗಸ್ಟ್ – 2017 | 2,30,00,970/- |
| 3 | ಜನವರಿ – 2018 | 1,78,80,560/- |
| 4 | ಆಗಸ್ಟ್ – 2018 | 2,56,06,110/- |
| 5 | ಜನವರಿ – 2019 | 1,70,38,660/- |
| 6 | ಆಗಸ್ಟ್ -2019 | 2,29,96,865/- |
| 7 | ಜನವರಿ – 2020 | 1,16,45,798/- |
| 8 | ಆಗಸ್ಟ್ – 2020 | ಲಾಕ್ ಡೌನ್ |
| 9 | ಜನವರಿ - 2021 | ಲಾಕ್ ಡೌನ್ |
| 10 | ಆಗಸ್ಟ್ - 2021 | ಫಲಪುಷ್ಪ ಪ್ರದರ್ಶನ ಜರುಗಿರುವುದಿಲ್ಲ |

| | | |
|---|---|---|
| 11 | ಜನವರಿ – 2022 | ಫಲಪುಷ್ಪ ಪ್ರದರ್ಶನ ಜರುಗಿರುವುದಿಲ್ಲ |
| 12. | ಆಗಸ್ಟ್ – 2022 | 3,40,70,430/- |

**8a) ಮೈಸೂರು ಉದ್ಯಾನಕಲಾ ಸಂಘದ ಸ್ಥಿರಾಸ್ತಿಯ ವಿವರ**

| ಕ್ರ. ಸಂ | **ವಿವರ** | **ವಿಸ್ತೀರ್ಣ (ಎಕರೆಗಳಲ್ಲಿ)** | **ಅಂದಾಜು ಮೌಲ್ಯ (ರೂ ಲಕ್ಷಗಳಲ್ಲಿ)** |
|---|---|---|---|
| 1 | ಹೊಸಕೋಟೆ ಫಾರಂ | 2 ಎಕರೆ 24 ಗುಂಟೆ | 4500.00 |

**8b) ಮೈಸೂರು ಉದ್ಯಾನಕಲಾ ಸಂಘದ ಬ್ಯಾಂಕ್ ಖಾತೆಯಲ್ಲಿರುವ ಮೊತ್ತದ ವಿವರಗಳು**

| **ಕ್ರ. ಸಂ** | **ವಿವರ** | **ಮೊತ್ತ (ರೂ ಲಕ್ಷಗಳಲ್ಲಿ)** |
|---|---|---|
| 1 | ಎಸ್.ಬಿ.ಐ ಬ್ಯಾಂಕ್ ಬ್ಯಾಲೆನ್ಸ್ | 183.50 |
| 2 | ಎಸ್.ಬಿ.ಐ ಬ್ಯಾಂಕ್ ಸ್ಥಿರ ಠೇವಣಿ | 426.00 |
| 3 | ಕರ್ನಾಟಕ ಬ್ಯಾಂಕ್ ಸ್ಥಿರ ಠೇವಣಿ | 65.00 |
| | **ಒಟ್ಟು ಮೊತ್ತ** | **674.50** |

(ಒಟ್ಟು ಮೊತ್ತ ರೂ. ಆರು ಕೋಟಿ ಎಪ್ಪತ್ತ ನಾಲ್ಕು ಲಕ್ಷದ ಐವತ್ತು ಸಾವಿರ ಮಾತ್ರ)

9) ತೋಟಗಾರಿಕೆ ಇಲಾಖೆ ಮತ್ತು ಮೈಸೂರು ಉದ್ಯಾನ ಕಲಾ ಸಂಘದ ಸಂಯುಕ್ತ ಆಶ್ರಯದಲ್ಲಿ ಕೈಗೊಳ್ಳಲಾಗುತ್ತಿದ್ದ ಫಲಪುಷ್ಪ ಪ್ರದರ್ಶನ ಮತ್ತು ಇತರೇ ಪೂರಕ ಪ್ರದರ್ಶನಗಳು ಶೇ.95 ಕ್ಕೂ ಹೆಚ್ಚಿನ ಪಾತ್ರವು ತೋಟಗಾರಿಕೆ ಇಲಾಖೆಯ ತಾಂತ್ರಿಕ ಅಧಿಕಾರಿಗಳ ತೊಡಗಿಸುವಿಕೆ ಮತ್ತು ಮುಂದಾಳತ್ವದಲ್ಲಿ ಜರುಗುತ್ತಿದ್ದವು. ಪ್ರದರ್ಶನದಿಂದ ಬರುವ ಲಾಭವು ಮಾತ್ರ ಮೈಸೂರು ಉದ್ಯಾನ ಕಲಾ ಸಂಘಕ್ಕೆ ಸಂದಾಯವಾಗುತ್ತಿತ್ತು.

10) ಮೈಸೂರು ಉದ್ಯಾನ ಕಲಾ ಸಂಘಕ್ಕೆ ನೀಡಿರುವ ಗುತ್ತಿಗೆಯನ್ನು ರದ್ದುಪಡಿಸಿ, ತೋಟಗಾರಿಕೆ ಇಲಾಖೆಯ ಕಾರ್ಯ ಚಟುವಟಿಕೆಗಳಿಗೆ ಪೂರಕವಾಗುವಂತೆ ಹಸರೀಕರಣವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಅತ್ಯಂತ ಕಡಿಮೆ ರಿಯಾಯಿತಿ ದರದಲ್ಲಿ ಜಾಗವನ್ನು ನೀಡಲಾಗಿದ್ದರೂ ಸರ್ಕಾರವು ಯಾವ ಉದ್ದೇಶಕ್ಕಾಗಿ ಜಮೀನು ನೀಡಲಾಗಿದೆಯೋ ಆ ಉದ್ದೇಶವನ್ನು ನಿರೀಕ್ಷಿತ ಮಟ್ಟದಲ್ಲಿ ಗುರಿ ತಲುಪುವಲ್ಲಿ ಸದರಿ ಸಂಸ್ಥೆಯು ವಿಫಲವಾಗಿದೆ. ಈ ಅಂಶಗಳನ್ನು ಮನಗಂಡ ಸರ್ಕಾರವು ಸರ್ಕಾರದ ಆದೇಶ ಸಂಖ್ಯೆ: HORTI 367 HGM 2022, ಬೆಂಗಳೂರು, ದಿನಾಂಕ:18-10-2022 ರಲ್ಲಿ ಸದರಿ ಸಂಸ್ಥೆಗೆ ನೀಡಿರುವ ಗುತ್ತಿಗೆಯನ್ನು ರದ್ದುಪಡಿಸಿ ತೋಟಗಾರಿಕೆ ಇಲಾಖೆಗೆ ಜಮೀನನ್ನು ಹಿಂಪಡೆಯಲು ಆದೇಶಿಸಲಾಗಿದೆ.

11) ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್.ಪಿ.ಸಂ:21493/2022 ರೀತ್ಯಾ ದಾವೆಯು ದಾಖಲಾಗಿದ್ದು, ವಿಚಾರಣೆಯ ಹಂತದಲ್ಲಿರುತ್ತದೆ. ಮುಂದುವರೆದು ಕರಾರು ಅವಧಿಯು ಮುಗಿದ ನಂತರದಲ್ಲಿ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಸದರಿ ದಾವೆಗಳ ತೀರ್ಪಿಗೆ ಒಳಪಟ್ಟು ವಸೂಲಾತಿ ಕ್ರಮವನ್ನು ನಿಯಮಾನುಸಾರ ಜರುಗಿಸಲಾಗುವುದು.

12) ಪ್ರಸ್ತುತ ರಾಜ್ಯ ವ್ಯಾಪ್ತಿಯಲ್ಲಿ ಲಾಲ್ ಬಾಗ್ ಒಳಗೊಂಡಂತೆ ಇಲಾಖೆಗೆ ಒಳಪಡುವ ಒಟ್ಟಾರೆ 11 ಸುಸಜ್ಜಿತ ತರಬೇತಿ ಕೇಂದ್ರಗಳಿದ್ದು, ವಾರ್ಷಿಕ 600 ಕ್ಕೂ ಹೆಚ್ಚಿನ ರೈತ ಮಕ್ಕಳಿಗೆ ತೋಟಗಾರಿಕೆ ಬಗ್ಗೆ ನಿರಂತರವಾಗಿ 10 ತಿಂಗಳ ಅವಧಿಯ ತರಬೇತಿಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲಾಗುತ್ತಿದೆ. ಇದರ ಜೊತೆಗೆ ಇಲಾಖೆಯ ವಿವಿಧ ಯೋಜನೆಗಳ ಅಡಿಯಲ್ಲಿ 55,000 ಕ್ಕೂ ಹೆಚ್ಚು ರೈತರು ಮತ್ತು ತೋಟಗಾರಿಕೆ ಆಸಕ್ತರಿಗೆ ತರಬೇತಿಗಳನ್ನು ನೀಡಲಾಗುತ್ತಿದೆ.

13) ಲಾಲ್ ಬಾಗ್ ನಲ್ಲಿ ಇವರೆಗೆ 212 ಫಲಪುಷ್ಪ ಪ್ರದರ್ಶನಗಳು ಜರುಗಿದ್ದು, ಇವುಗಳ ಅನುಷ್ಠಾನವನ್ನು ಶೇ.95 ರಷ್ಟು ಇಲಾಖಾ ಅಧಿಕಾರಿಗಳ ತಾಂತ್ರಿಕತೆ ಮತ್ತು ಮೇಲ್ವಿಚಾರಣೆಯಲ್ಲಿ ಜರುಗುತ್ತಿವೆ. ಪ್ರಸ್ತುತ ಇಲಾಖೆಯಲ್ಲಿ ತಾಂತ್ರಿಕ ಪರಿಣಿತ ಹೊಂದಿರುವ ಒಟ್ಟು ಅಧಿಕಾರಿಗಳ ಸಂಖ್ಯೆ 1762 ಆಗಿದ್ದು, ಅದರಲ್ಲಿ 42 ಸಂಖ್ಯೆ ಪಿಹೆಚ್ ಡಿ ಪರಿಣಿತರು, 500 ಕ್ಕೂ ಹೆಚ್ಚು ಎಂಎಸ್ಸ್.ಸಿ ಪರಿಣಿತರು ಮತ್ತು 1220 ಬಿಎಸ್ಸ್.ಸಿ ಪರಿಣಿತರು ಇದ್ದಾರೆ.

14) ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು 2023ನೇ ಸಾಲಿನ ಗಣರಾಜ್ಯೋತ್ಸವದ 213ನೇ ಫಲಪುಷ್ಪ ಪ್ರದರ್ಶನವನ್ನು ಸುವ್ಯವಸ್ಥಿತವಾಗಿ ಹಾಗೂ ಯಶಸ್ವಿಯಾಗಿ ಆಯೋಜಿಸಲಾಗಿದ್ದು, ಮುಂಬರುವ ಎಲ್ಲಾ ಫಲಪುಷ್ಪ ಪ್ರದರ್ಶಗಳನ್ನು ಮೈಸೂರು ಉದ್ಯಾನ ಕಲಾಸಂಘ ಅಥವಾ ಇತರೆ ಯಾವುದೇ ಖಾಸಗಿ ಅಥವಾ ಬಾಹ್ಯ ಸಂಘ ಸಂಸ್ಥೆಗಳ ಸಹಯೋಗವಿಲ್ಲದೆ ಸಂಪೂರ್ಣವಾಗಿ ತೋಟಗಾರಿಕೆ ಇಲಾಖೆಯ ವತಿಯಿಂದ ಆಯೋಜಿಸುತ್ತದೆ.

ಈ ಎರಡು ಸಂಸ್ಥೆಗಳಿಗೆ ನೀಡಲಾಗಿದ್ದ ಜಾಗವನ್ನು ಖಾಲಿ ಮಾಡದಿರಲು ಕಾರಣವನ್ನು ಕೇಳಿ ನೋಟೀಸ್ ನೀಡಲಾಗಿದ್ದು, ಈ ಬಗ್ಗೆ ಈ ಸಂಸ್ಥೆಗಳು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ವಿಷಯವು ನ್ಯಾಯಾಲಯದ ಪರಿಶೀಲನೆಯಲ್ಲಿದೆ. ಹೀಗಾಗಿ ಸರ್ಕಾರವು ಪ್ರತಿಷ್ಠಿತ ಲಾಲ್‌ಬಾಗ್ ಒಳಬಾಗದಲ್ಲಿ ಖಾಸಗಿ ಸೊಸೈಟಿಗಳಿಗೆ ನೀಡಿದ ಸರ್ಕಾರಿ ಜಮೀನನ್ನು ಹಿಂಪಡೆಯಲು ಕ್ರಮ ಕೈಗೊಳ್ಳಲಾಗಿದೆ.

No. HORTI/75/HGM/2023

(ಮುನಿರತ್ನ)
ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು